ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	66
ಮಾನ್ಯ ಸದಸ್ಯರ ಹೆಸರು	:	ಶ್ರೀ ಕಾಂತರಾಜ್(ಬಿಎಂಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	:	03.03.2020
ಉತ್ತರಿಸಬೇಕಾದ ಸಚಿವರು	:	ಮಾನ್ಯ ನಗರಾಭಿವೃದ್ಧಿ ಸಚಿವರು

	ಪ್ರಶ್ನೆ	ಉತ್ತರ
ಅ)	ತುಮಕೂರು ಮಹಾನಗರಪಾಲಿಕೆ ವ್ಯಾಪ್ತಿಗೆ ಒಳಪಡುವ ಐ.ಡಿ.ಎಸ್.ಎಂ.ಟಿ ಯೋಜನೆಯಡಿ ಯಾವ ಯಾವ ಬಡಾವಣೆಗಳಲ್ಲಿ ನಿವೇಶನಗಳನ್ನು ನಿರ್ಮಿಸಿ ವಿಂಗಡಿಸಲಾಗಿದೆ;	ತುಮಕೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿನ ವಾರ್ಡ್ ನಂ 2ರಲ್ಲಿ ಅರಳೀಮರದ ಪಾಳ್ಯದಲ್ಲಿ ಐ.ಡಿ.ಎಸ್.ಎಂ.ಟಿ ಯೋಜನೆಯಡಿಯಲ್ಲಿ ಒಟ್ಟು-1175 ನಿವೇಶನಗಳನ್ನು ನಿರ್ಮಿಸಲಾಗಿದೆ.
ಆ)	ಆಯಾ ಬಡಾವಣೆಗಳಲ್ಲಿ ಸದರಿ ಯೋಜನೆಯಡಿ ವಿಂಗಡಿಸಿ ಹಂಚಿಕೆಯಾಗದೆ ಉಳಿದಿರುವ ನಿವೇಶನಗಳ ಸಂಖ್ಯೆ ಎಷ್ಟು;(ಯಾವ ಯಾವ ಅಳತೆಯ ಎಷ್ಟೆಷ್ಟು ನಿವೇಶನಗಳಿವೆ ಎಂಬ ಬಗ್ಗೆ ಸಂಪೂರ್ಣ ಮಾಹಿತಿ ನೀಡುವುದು)	ಸದರಿ ಬಡಾವಣೆಯಲ್ಲಿ ಯಾವುದೇ ನಿವೇಶನಗಳು ಹಂಚಿಕೆಗೆ ಬಾಕಿ ಇರುವುದಿಲ್ಲ. ಸದರಿ ಬಡಾವಣೆಯಲ್ಲಿ ಈಗಾಗಲೇ 1) 25*30 ಅಳತೆಯ 401 ನಿವೇಶನಗಳು 2) 30*40 ಅಳತೆಯ 419 ನಿವೇಶನಗಳು 3) 60*40 ಅಳತೆಯ 154 ನಿವೇಶನಗಳು 4) ವಿವಿಧ ಅಳತೆಯ ಮೂಲೆ ನಿವೇಶನಗಳು-201 ಒಟ್ಟು -1175 ನಿವೇಶನಗಳನ್ನು ವಿವಿಧ ಹಂತಗಳಲ್ಲಿ ಐ.ಡಿ.ಎಸ್.ಎಂ.ಟಿ ಸಮಿತಿ ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ತೀರ್ಮಾನದ ರೀತ್ಯಾ ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರ ತುಮಕೂರು ರವರಿಂದ(1ನೇ ಹಂತ-248 2ನೇ ಹಂತ-346, 3ನೇ ಹಂತ-262, ಒಟ್ಟು=856) ನಿವೇಶನಗಳನ್ನು ಹಂಚಿಕೆ ಮಾಡಲಾಗಿರುತ್ತದೆ. ನಂತರ 1998ರಲ್ಲಿ ತುಮಕೂರು ನಗರಸಭೆ ವತಿಯಿಂದ ಉಳಿಕೆ 319(118 ನಿವೇಶನಗಳನ್ನು ಮತ್ತು 201 ವಿವಿಧ ಅಳತೆಯ ಮೂಲೆ ನಿವೇಶನಗಳನ್ನು ಬಹಿರಂಗ ಹರಾಜು ಮಾಡಲಾಗಿದೆ)

		ಐ.ಡಿ.ಎಸ್.ಎಂ.ಟಿ ಸಮಿತಿ ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿಹಂಚಿಕೆ ಮಾಡಲಾಗಿರುತ್ತದೆ.
ಇ)	ಸದರಿ ಯೋಜನೆಯಡಿ ನಿವೇಶನಗಳನ್ನು ಯಾವ ಯಾವ ವರ್ಗದವರಿಗೆ ಎಷ್ಟು ದರವನ್ನು ನಿಗಧಿಪಡಿಸಿ ಹಂಚಿಕೆ ಮಾಡಲಾಗಿದೆ; ಕಳೆದ ಐದು ವರ್ಷಗಳಿಂದ ಇಲ್ಲಿಯವರೆಗೆ ಹಂಚಿಕೆಯಾದ ನಿವೇಶನಗಳ ಮಾಹಿತಿ ನೀಡುವುದು)	25*30 ಅಳತೆಯ ನಿವೇಶನಗಳಿಗೆ ರೂ. 4050. 30*40 ಅಳತೆಯ ನಿವೇಶನಗಳಿಗೆ ರೂ -14200. 60*40 ಅಳತೆಯ ನಿವೇಶನಗಳಿಗೆ ರೂ. 21600ಗಳ ದರದಲ್ಲಿ ಎಲ್ಲಾ ವರ್ಗದವರಿಗೂ ಹಂಚಿಕೆ ಮಾಡಲಾಗಿರುತ್ತದೆ ಮೂಲೆ ನಿವೇಶನಗಳನ್ನು ನಿಯಮಾನುಸಾರ ಬಹಿರಂಗ ಹರಾಜು ಮಾಡಲಾಗಿದೆ ಕಳೆದ 5 ವರ್ಷಗಳಿಂದ ಪ್ರಸ್ತುತವರೆಗೆ ಯಾವುದೇ ನಿವೇಶನಗಳನ್ನು ಹಂಚಿಕೆ ಮಾಡಿರುವುದಿಲ್ಲ.
ಈ)	ಐ.ಡಿ.ಎಸ್.ಎಂ.ಟಿ ಯೋಜನೆಯಡಿ ಉಳಿದಿರುವ ನಿವೇಶನವನ್ನು ಯಾವ ಮಾನದಂಡವನ್ನು ಅನುಸರಿಸಿ ಯಾವಾಗ ಹಂಚಿಕೆ ಮಾಡಲಾಗುವುದು? (ವಿವರ ನೀಡುವುದು)	ಸದರಿ ಬಡಾವಣೆಯಲ್ಲಿ ಹಂಚಿಕೆಮಾಡುವ ಬಗ್ಗೆ ಯಾವುದೇ ನಿವೇಶನಗಳು ಬಾಕಿ ಇರುವುದಿಲ್ಲ.

ಕಡತ ಸಂಖ್ಯೆ: ನಅಇ 003 ತುಮಪಾ 2020(ಇ)

(ಬಿ ಎ ಬಸವರಾಜ)
ನಗರಾಭಿವೃದ್ಧಿ ಸಚಿವರು